...ವಿ ಅಶ್ವತಿ, ಭಾ.ಆ.ಸೇ
ನಿರ್ದೇಶಕರು
ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ದೂರವಾಣಿ ಸಂಖ್ಯೆ:080-22879381/82/83
C/o ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
2 ನೇ ಮಹಡಿ, ಎಂ.ಎಸ್. ಬಿಲ್ಡಿಂಗ್
ಬೆಂಗಳೂರು-560001
E-mail.id: icps.kar@gmail.com

ಸಂಖ್ಯೆ:ಕಿಸಿಪಿಎಸ್/ಸಾರಾ/ನೋಂ-12/2019-20

ದಿನಾಂಕ: 20-03-2020

ವಿಷಯ:- ಬಾಲ ನ್ಯಾಯ ಕಾಯ್ದೆ-2015 ರಡಿ ನೋಂದಣೆ ಮತ್ತು ನವೀಕರಣಕ್ಕೆ ಕಡ್ಡಾಯವಾಗಿ ಸಲ್ಲಿಸಬೇಕಾಗಿರುವ ದಾಖಲೆಗಳ ಬಗ್ಗೆ

ಉಲ್ಲೇಖ:- ಬಾಲ ನ್ಯಾಯ ಕಾಯ್ದೆ-2015, ಬಾಲ ನ್ಯಾಯ ಮಾದರಿ ನಿಯಮಗಳು 2016

****************

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳನ್ನು ಬಾಲ ನ್ಯಾಯ ಕಾಯ್ದೆ-2015 ರಡಿ ನೋಂದಣೆ ಮತ್ತು ನವೀಕರಣ ಮಾಡಿಸಲು ಸಲ್ಲಿಸುತ್ತಿರುವ ಪ್ರಸ್ತಾವನೆಗಳೊಂದಿಗೆ ಕಡ್ಡಾಯವಾಗಿ ಬಾಲ ನ್ಯಾಯ ಕಾಯ್ದೆ-2015 ಮತ್ತು ಬಾಲ ನ್ಯಾಯ ಮಾದರಿ ನಿಯಮಗಳು 2016(ನಿಯಮ 21 (2) ರನ್ವಯ) ಇರುವ ನಮೂನೆ-27 ಹಾಗೂ ಕೇಂದ್ರ ಕಛೇರಿಯಿಂದ ಸಿದ್ಧಪಡಿಸಲ್ಪಟ್ಟ ತಪಶೀಲು ಪಟ್ಟಿ ಮತ್ತು ಸಾಮರ್ಥ್ಯ ನಮೂನೆ (Capacity Format) ಇವುಗಳನ್ನು ಜಿಲ್ಲಾಧಿಕಾರಿಗಳ ಶಿಫಾರಸ್ಸುಗಳೊಂದಿಗೆ ಕಳುಹಿಸುವುದು ಆವಶ್ಯಕ.

ಈಗಾಗಲೇ ಕೇಂದ್ರ ಕಛೇರಿಗೆ ತಮ್ಮ ತಮ್ಮ ಜಿಲ್ಲೆಗಳಿಂದ ನೋಂದಣೆ ಮತ್ತು ನವೀಕರಣಕ್ಕೆ ಸಲ್ಲಿಸಿರುವ ಒಟ್ಟು ಪ್ರಸ್ತಾವನೆಗಳ ಸಂಖ್ಯೆ 101 ಇದ್ದು ಇವುಗಳಲ್ಲಿ ಬೆಂಗಳೂರು ನಗರದ 21 ಪ್ರಸ್ತಾವನೆಗಳಲ್ಲಿ ಮಾತ್ರ ನಮೂನೆ -27 ಬಾಲ ನ್ಯಾಯ ಮಾದರಿ ನಿಯಮಗಳು, 2016 ನಿಯಮ 21(2) ರ ಪ್ರಕಾರ ಸರಿ ಇದ್ದು, ಉಳಿದ ಪ್ರಸ್ತಾವನೆಗಳಲ್ಲಿ ಸದರಿ ನಮೂನೆಯು ರದ್ದಾಗಿರುವ ಕಾಯ್ದೆಯನ್ವಯ ಇರುತ್ತದೆ.

ನಮೂನೆ-27 ಸರಿ ಇರುವ ನೋಂದಣೆ ಮತ್ತು ನವೀಕರಣದ ಪ್ರಸ್ತಾವನೆಗಳ ಪಟ್ಟಿಯನ್ನು ಲಗತ್ತಿಸಿದೆ. ಸದರಿ ಪ್ರಸ್ತಾವನೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಬಾಕಿ ಪ್ರಸ್ತಾವನೆಗಳಿಗೆ ಕಡ್ಡಾಯವಾಗಿ ಬಾಲ ನ್ಯಾಯ ಕಾಯ್ದೆ ಮತ್ತು ನಿಯಮ 2016ರ ಪ್ರಕಾರ ಮಾತ್ರವೇ ನಮೂನೆ-27 ನ್ನು ಕಳುಹಿಸಬೇಕು.

ನಮೂನೆ-27 ಸರಿ ಇರುವ ನೋಂದಣೆ ಮತ್ತು ನವೀಕರಣದ ಪ್ರಸ್ತಾವನೆಗಳು ಸೇರಿದಂತೆ ಬಾಕಿ ಉಳಿದ ಎಲ್ಲಾ ಪ್ರಸ್ತಾವನೆಗಳಿಗೆ ಸಾಮರ್ಥ್ಯ ನಮೂನೆ(Capacity Format) ಕಳುಹಿಸುವುದು ಕಡ್ಡಾಯವಾಗಿದೆ.

ಮೇಲೆ ವಿವರಿಸಿದಂತೆ, ಬಾಕಿಯಿರುವ ಎಲ್ಲಾ ನೋಂದಣೆ ಮತ್ತು ನವೀಕರಣ ಪ್ರಸ್ತಾವನೆಗಳಿಗೆ ಪ್ರಸ್ತುತ ಬಾಲ ನ್ಯಾಯ ಕಾಯ್ದೆ, 2015 ಮತ್ತು ಬಾಲ ನ್ಯಾಯ ಮಾದರಿ ನಿಯಮಗಳು, 2016 ರನ್ವಯ ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆ 27, ತಪಶೀಲು ಪಟ್ಟಿ ಮತ್ತು ಸಾಮರ್ಥ್ಯ ನಮೂನೆ(Capacity Format) ಗಳನ್ನು ತುರ್ತಾಗಿ 3 ದಿನಗಳೊಳಗಾಗಿ ಪ್ರಧಾನ ಕಛೇರಿಗೆ ಕಡ್ಡಾಯವಾಗಿ ಕಳುಹಿಸುವಂತೆ ಈ ಪತ್ರದ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ

ಲಗತ್ತುಗಳು:
1. ನಮೂನೆ-27 (ಬಾಲ ನ್ಯಾಯ ಮಾದರಿ ನಿಯಮಗಳು.2016 21 (2) )
2. ಸಾಮರ್ಥ್ಯ ನಮೂನೆ (Capacity)
3. ತಪಶೀಲು ಪಟ್ಟಿ

ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ.

ಜಿಲ್ಲಾ ಮಕ್ಕಳ ರಕ್ಷಣಾ ಘಟಕ
99
26/05/2020